

ಹಂಚಿನಮನೆ ಮುದುಕಿ' ಎನ್ನುತ್ತಾ ದಂ ಎಳೆದು ತಲೆಯೆತ್ತಿ ಆಕಾಶದ ಕಡೆ ಹೊಗೆ ಬಿಟ್ಟ.

ಮಂಜುಳಾಳೊಂದಿಗಿದ್ದ ಶಿಕ್ಷಕ ವರ್ಗಕ್ಕಾಗಲೀ, ವಿದ್ಯಾರ್ಥಿಗಳಿಗಾಗಲೀ ಏನಂದೂ ಅರ್ಥವಾಗದೇ ಮಿಕಿ ಮಿಕಿ ನೋಡತೊಡಗಿದರು. 'ಅರೆ ಇದೇನಿದು. ಕಳೆದ ವಾರ ತಾನೇ ಸುಗ್ಗಿಹಬ್ಬಮುಗಿದಿದೆ… ಮತ್ತೆ ಈಗ್ಯಾವ ದೇವರ ಮೆರವಣಿಗೆ' ಎಂದಳು. ಅಲ್ಲಿ ಅವಳೊಂದಿಗಿದ್ದ ಶಿಕ್ಷಕ ವರ್ಗಕ್ಕೆ, ವಿದ್ಯಾರ್ಥಿಗಳಿಗೆ ಏನೊಂದೂ ಅರ್ಥವಾಗದೆ ಮಿಕಿ ಮಿಕಿ ನೋಡತೊಡಗಿದರು.

'ಅದೇನು ಗುಂಡಣ್, ಸ್ವಲ್ಪ ಸರಿಯಾಗಿ ಹೇಳಿ' ಎಂದಳು ಮಂಜುಳಾ.

'ಇದು ಆ ಹಂಚಿನಮನೆಯವರ ರಗಳೆ… ಊರೊಳಗಿರೋ ಅಣ್ಣನ ಮನೆಯವರಿಗೂ, ದೇವರಬನದಲ್ಲಿರೋ ತಮ್ಮನ ಮನೆಯವರಿಗೂ ಮುದುಕಿಯ ಪಾಲಿನ ವಿಚಾರದಲ್ಲಿ ಜಟಾಪಟಿ ನಡಿತಾ ಇದೆ. ಆ ಮುದುಕಿ ಮನೆ ಪಾಲಾದ ಮೇಲೆ, ಇಲ್ಲಿವರೆಗೂ ದೇವರಬನದ ಮಂಜುನಾಥನ ಮನೇಲೇ ಇತ್ತು. ಇತ್ತೀಚೆಗೆ ಅವನ ಅಣ್ಣ ಪುಟ್ಟೇಗೌಡನ ಮನೆಯವರು ಆ ಮುದುಕಿ ಪಾಲಿನ ಆಸ್ತಿ ವಿಚಾರದಲ್ಲಿ ರಗಳೆ ಶುರುಮಾಡ್ಕಂಡಿದಾರೆ…ಊರೊಳಗೆ ಹಂಚಿನಮನೆ ಎದುರು ಓಣಿಲೇ ನಮ್ಮ ಮನೆ ಇರೋದು ಅಲ್ವಾ. ಹಂಗಾಗಿ ಅವರ ಮನೆ ರಗಳೆ ದಿನಾ ನೋಡ್ತಿರ್ತೀವಿ.

ಪುಟ್ಟೇಗೌಡ ಮೊನ್ನೆ ಜನ ಕರ್ಕಂಡು ಹೋಗಿ ಮುದುಕಿಯ ಕಂಬಳಿಲಿ ಸುತ್ತಿಗೊಂಡು ಹೊತ್ಗಂಡ್ ಬಂದಿದ್ದ. ಅಷ್ಟ್ ವರ್ಷದಿಂದ ಆ ಮುದುಕಿಯ ತನ್ನ ಮನೇಲೆ ಇಟ್ಗಂಡು ಸಾಕಿಕೊಂಡಿದ್ದ ಮಂಜುನಾಥ